**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 359/2015 ಸಿಡಬ್ಲ್ಯೂ: 12 ಪಿಡಬ್ಲ್ಯೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 27-11-2025

ಹೆಸರು : ಶಿವರಾಜ್

ತಂದೆ ಹೆಸರು : ಮಲ್ಲೇಶಪ್ಪ ದಳಪತಿ

ವಯಸ್ಸು : 41 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಗೌಡನಳ್ಳಿ , ತಾ. ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಘಾತ ನನ್ನ ಕಣ್ಣಾರೆ ಕಂಡಿಲ್ಲ. ಪೋಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.24-05-2014 ರಂದು ರಾತ್ರಿ 08-00 ಗಂಟೆ ಸುಮಾರಿಗೆ ಮೃತ ಮಹೇಶ್ ಹಾಗೂ ಆತನ ಅಳಿಯನಾದ ಸತೀಶ್ ಇವರು ಮೋಟಾರು ಸೈಕಲ್ ಮೇಲೆ ಕುಳಿತುಕೊಂಡು ಊರಿಗೆ ಹೋಗುವಾಗ ನಾಮವಾರ ಗೇಟಿನ ಹತ್ತಿರ ರೋಡಿನ ಮೇಲೆ ಕೈ ಪಂಪ್ ಬೋರಿಂಗ್ ಎದುರುಗಡೆ ಸದರಿ ಮಹೇಶ್ ಮತ್ತು ಆತನ ಅಳಿಯನಾದ ಸತೀಶ್ ಇವರಿಬ್ಬರಿಗೆ ಯಾದಗಿರಿ ಕಡೆಯಿಂದ ಯಾವುದೋ ಒಂದು ವಾಹನವು ಮೊಟಾರು ಸೈಕಲ್ ಗೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಿಲ್ಲ. ಆಗ ಸದರಿ ಅಪಘಾತದಲ್ಲಿ ಮಹೇಶ್ ಈತನಿಗೆ ಭಾರಿ ರಕ್ತಗಾಯ ಆಗಿತ್ತು ಮತ್ತು ಆತನ ಅಳಿಯ ಸತೀಶ್ ನಿಗೆ ಭಾರಿ ರಕ್ತಗಾಯ ಆಗಿ ತೀರಿಕೊಂಡಿದ್ದರು ಎಂದರೆ ಸರಿಯಿಲ್ಲ. ನಂತರ ಸದರಿ ಮಹೇಶ್ ಈತನಿಗೆ ಮುಂದಿನ ಚಿಕಿತ್ಸೆ ಗಾರಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಿಲ್ಲ. ಸದರಿ ಅಪಘಾತ ಆರೋಪಿಯ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಓದಿ ಹೇಳಲಾಯಿತು ಸದರಿ ದಾಖಲಾತಿಯು ಸಾಕ್ಷಿಯ ಹೇಳಿಕೆ ಮತ್ತು

ಪುರವಣಿ ಹೇಳಿಕೆಯಾಗಿದ್ದು ಸಾಕ್ಷಿಯು ಅದರಲ್ಲಿರುವ ವಿಷಯಗಳನ್ನು ನಿರಾಕರಿಸಿರುವುದರಿಂದ ಸದರಿ ನಿರಾಕರಿಸಿದ ಭಾಗವನ್ನು ಕ್ರಮವಾಗಿ ನಿ ಪಿ 22 ಮತ್ತು 23 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**